ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ಪಟ್ರೇನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: **01.08.14**

ಈ ವಾರದ ಮುನ್ಸೂಚನೆ (ದಿನಾಂಕ **02-08-14 to 06.08.14** ವರೆಗೆ)

ನಿಯತಾಂಕಗಳು	02.08.14	03.08.14	04.08.14	05.08.14	06.08.14
ಮಳೆ (ಮಿ ಮಿ)	2	3	1	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	31	30	30	31	32
ಕನಿಷ್ಠ ಉಷ್ಣಾಂಶ (ಡಿ.ಸೆ.)	21	21	21	22	22
ಮೋಡ (ಪ್ರಮಾಣ)	8	8	7	7	7
ಅರ್ದ್ರತೆ ೭.೨೦ ಬೆ (ಶೇ)	81	86	83	84	82
ಅರ್ದ್ರತೆ ೨.೨೦ ಮ (ಶೇ)	55	54	48	52	49
ಗಾಳಿಯ ವೇಗ (ಕಿ.ಮಿ/ಗಂಟೆಗೆ)	7	7	9	9	8
ಗಾಳಿಯ ದಿಕ್ಕು (ಡಿಗ್ರಿ)	260	255	260	255	260

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಚಿಕ್ಕಬಳ್ಳಾಪುರ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ ಹಾಗೂ ಕೆಲವೊಮ್ಮೆ ಹಗುರವಾದ ಮಳೆಯ ಸಂಭವವಿದೆ ಎಂದು ವರದಿಯ ಪ್ರಕಾರ ತಿಳಿದುಬರುತ್ತದೆ. ದಿನದ ಗರಿಷ್ಠ ಉಷ್ಣಾಂಶವು **30.0-32.0°C** ಮತ್ತು ಕನಿಷ್ಠ **21-22°C** ಇರಲಿದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **81-86%** ಇದ್ದು, ಮಧ್ಯಾಹ್ನ **48-55 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **7-9** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಹೊಲಕ್ಕೆ ಬಿತ್ತನೆಗೆ ಮುಂಚಿತವಾಗಿ ಸಾವಯವ ಗೊಬ್ಬರ, ಹಸಿರೆಲೆ ಗೊಬ್ಬರಗಳನ್ನು ಹಾಕಿ ಭೂಮಿ ಸಿದ್ಧ ಮಾಡಿಕೊಂಡು, ಮಳೆಯಾಗಿರುವ ಕಡೆ ಬಿತ್ತನೆ ಮಾಡಲು ತಿಳಿಸಲಾಗಿದೆ.

ರಾಗಿ: ಜಿ.ಪಿ.ಯು–**45,48,26,66.** ಹಂತ ಹಂತವಾಗಿ ರಾಗಿಯ ಸಸಿ ಮಡಿಗಳನ್ನು ಸಿದ್ಧ ಮಾಡಿಕೊಳ್ಳಬೇಕು. ರಾಗಿಯಲ್ಲಿ ಕಳೆ ತೆಗೆಯಬೇಕು

ತೊಗರಿ: ಅಂತರ ಬೇಸಾಯ ಮಾಡಿ ಕಳೆ ತೆಗೆಯಬೇಕು ಹಾಗೂ ಗಿಡದ ಸಾಲಿಗೆ ಮಣ್ಣನ್ನು ಏರಿಸಬೇಕು.

ಈ ತಿಂಗಳಲ್ಲಿ ಬೆಳೆಯಬಹುದಾದ ಬೆಳೆಗಳು:

ಅಲಸಂದೆ: ಟಿ.ವಿ.ಎಕ್ಸ್–**944,** ಕೆ. ಬಿ.ಸಿ– **1,** ಕೆ.ಎಮ್–**5,** ಪಿ.ಕೆ.ಬಿ– **4** (ತರಕಾರಿಗಾಗಿ) ಅವರೆ: ಹೆಚ್,ಎ.– **3,** ಹೆಚ್,ಎ–**4.** ಹುರುಳಿ: ಕೆ.ಬಿ.ಹೆಚ್–**1,** ಪಿ.ಹೆಚ್.ಜಿ–**9**

ಗುಲಾಬಿ: ಕಬ್ಬಿಣದ ಕೊರತೆಯಿಂದ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಹತೋಟಿ ಮಾಡಲು ಬಂಯೋ–೨೦ ಅಥವಾ ಮಲ್ಟಿಪ್ಲೆಕ್ಸ್ ನ ಲಘು ಪೋಷಕಾಂಶಗಳನ್ನು ಕೊಡಬೇಕು.

ಸಸ್ಯ ಸಂರಕ್ಷಣೆ: ಥ್ರಿಪ್ಸ್/ಹೇನು/ಎಫಿಡ್ಸ್ ಹಾಗೂ ಇನ್ನಿತರೆ ರಸ ಹೀರುವ ಕೀಟಗಳ ನಿಯಂತ್ರಣಕ್ಕೆ ಆಕ್ಟ್ರ ಅಥವಾ ಇಮಿಡಾಕ್ಲೋಪ್ರಿಡ್ ಅನ್ನು (1ಗ್ರಾಂ/ಲೀ) ಅಥವಾ ಬೇವಿನ ಕಷಾಯ/ಎಣ್ಣೆಯನ್ನು ಸಿಂಪಡಣೆ ಮಾಡಬೇಕು.

ಕ್ಯಾಪ್ಸಿಕಂ: ಬೂದಿ ರೋಗವು ತೀವ್ರವಾಗಿದ್ದಲ್ಲಿ, ಗಿಡದಲ್ಲಿರುವ ಹಾಗೂ ನೆಲದಲ್ಲಿ ಬಿದ್ದಿರುವ ರೋಗ ಪೀಡಿತ ಎಲೆಗಳನ್ನು ಆಯ್ದುಕೊಂಡು ದೂರಕ್ಕೆ ಕೊಂಡೊಯ್ದು ನಾಶ ಪಡಿಸಬೇಕು. ನಂತರ ಒಂದು ಟ್ಯಾಂಕ್ ನೀರಿಗೆ ಎರಡು ಸಣ್ಣ ಶಾಂಪೂ ಪ್ಯಾಕ್ ಹಾಕಿ ನೀರನ್ನು ಬಿರುಸಾಗಿ ಎಲೆಗಳ ಕೆಳಭಾಗ ಚೆನ್ನಾಗಿ ನೆನೆಯುವಂತೆ ಸಿಂಪಡಿಸಬೇಕು. ಎರಡು ಅಥವಾ ಮೂರು ದಿನದ ಅಂತರದಲ್ಲಿ ಎರಡು ಬಾರಿ ಹೀಗೆ ಸಿಂಪಡಿಸಬೇಕು. ಆನಂತರ ಶಿಲೀಂಧ್ರನಾಶಕಗಳಾದ ನೇಟಿವೊ ಅಥವಾ ಬೇಲೆಟಾನ್ ಅನ್ನು ಸಿಂಪಡಿಸಬೇಕು.

ಸಹ ಸಂಶೋಧಕರು:

ಡಿ.ಶ್ರೀಧರ್

ನೋಡಲ್ ಅಧಿಕಾರಿ:

ಎನ್.ಎ.ಜನಾರ್ಧನಗೌಡ

ಬೆಂಗಳೂರು